**ಕರ್ನಾಟಕ ಲೋಕಾಯುಕ್ತ**

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಎಂವೈಎಸ್/3704/2017/ಪಿಪಿ ಬಹುಮಹಡಿಗಳ ಕಟ್ಟಡ,
ಡಾ: ಬಿ.ಆರ್. ಅಂಬೇಡ್ಕರ್ ವೀಧಿ,
ಬೆಂಗಳೂರು,
ದಿನಾಂಕ: 31/03/2021.

**ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(1) ರನ್ವಯ ವರದಿ**

ವಿಷಯ: ಎದುರುದಾರನು ಜಪ್ತಿಯಾದ ಮರಳನ್ನು ಮಾರಾಟಮಾಡಿ ಸರ್ಕಾರಕ್ಕೆ ನಷ್ಟವುಂಟುಮಾಡಿದರ ಮತ್ತು ಸದರಿ ನಷ್ಟವನ್ನು ಭರಿಸಿಕೊಳ್ಳುವ ಕುರಿತು ತೆಗೆದುಕೊಂಡ ಕ್ರಮದ ಬಗ್ಗೆ ಪಾಲನಾವರದಿಯನ್ನು ಸಲ್ಲಿಸುವ ಕುರಿತು.

*****

1. ದೂರುದಾರರಾದ ಶ್ರೀ ಕೆ.ಎಲ್.ಲಿಂಗರಾಜು ಬಿನ್ ಲೇಟ್ ಲಿಂಗನಾಯಕ, ಕುನ್ನಗಳ್ಳಿ ಗ್ರಾಮ, ಕೊಳ್ಳೇಗಾಲ ತಾಲ್ಲೂಕು, ಚಾಮರಾಜನಗರ ಜಿಲ್ಲೆ (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ಇವರು ಶ್ರೀ ಶೀಣ್ಣಣ್ಣ, ಸಹಾಯಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಐ.ಬಿ., ಹತ್ತಿರ, ಕೊಳ್ಳೇಗಾಲ ತಾಲ್ಲೂಕು, ಚಾಮರಾಜನಗರ ಜಿಲ್ಲೆ (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ದೂರನ್ನು ಸಲ್ಲಿಸಿರುತ್ತಾರೆ.

2. ದೂರಿನ ಸಂಕ್ಷಿಪ್ತ ಸಾರಾಂಶ:- 2015-16 ಈ ಎರಡು ವರ್ಷಗಳಲ್ಲಿ ಸುಮಾರು 20 ಲಕ್ಷ ರೂಪಾಯಿಗಳ ಮೌಲ್ಯದ ಸರ್ಕಾರದ ಮರಳನ್ನು ಕೊಳ್ಳೇಗಾಲ ತಾಲ್ಲೂಕು ಕೆ.ಪಿ.ಡಬ್ಲ್ಯೂ.ಡಿ. ಕಛೇರಿಯ ಅಸಿಸ್ಟೆಂಟ್ ಇಂಜಿನಿಯರ್ ಆದ ಎದುರುದಾರರು ಮಾರಾಟ ಮಾಡಿ ಸ್ವಂತಕ್ಕೆ ಬಳಸಿರುತ್ತಾರೆ. ಎದುರುದಾರರ ವಿರುದ್ಧ ತನಿಖೆ ಮಾಡಿ ಹಣವನ್ನು ವಸೂಲಿ ಮಾಡಿ ಸರ್ಕಾರದ ಖಜಾನೆಗೆ ಜಮಾ ಮಾಡಬೇಕೆಂದು ಕೋರಿರುತ್ತಾರೆ.

3. ದೂರುದಾರನು ಮಾಹಿತಿ ಹಕ್ಕು ಕಾಯ್ದೆ ಅಡಿಯಲ್ಲಿ ಪಡೆದಿರುವ ದಾಖಲೆಯನ್ನು ಪರಿಶೀಲಿಸಲಾಗಿ ದಿನಾಂಕ: 04/05/2015 ರಿಂದ 14/10/2016ರ ಅವಧಿಯಲ್ಲಿ ಅಕ್ರಮ ಮರಳು ಸಾಗಿಸುತ್ತಿದ್ದವರ ಮೇಲೆ 98 ಪ್ರಕರಣಗಳನ್ನು ದಾಖಲಿಸಿ 107 ಜನರನ್ನು ದಸ್ತಗಿರಿ ಮಾಡಿ ಮರಳು ಜಪ್ತಿ ಮಾಡಿದ್ದು, ಘನ ನ್ಯಾಯಾಲಯದ ಆದೇಶದಂತೆ ಅಮಾನತ್ತು ಪಡಿಸಿದ ಮರಳನ್ನು ತನಿಖಾ ಅವಧಿಯಲ್ಲಿ ತಹಶೀಲ್ದಾರ್ ಹಾಗೂ ಪಿ.ಡಬ್ಲ್ಯೂ.ಡಿ., ಇಲಾಖೆಗೆ ವರ್ಗಾವಣೆ ಮಾಡಿರುವುದಾಗಿ ನಮೂದಿಸಲಾಗಿರುತ್ತದೆ.

4. **ಎದುರುದಾರರ ಆಕ್ಷೇಪಣೆ:-**

ಕೊಳ್ಳೇಗಾಲ ಲೋಕೋಪಯೋಗಿ ಇಲಾಖೆ ಉಪ ವಿಭಾಗದ ಕಛೇರಿಯಲ್ಲಿ ದಿನಾಂಕ: 13/11/1998 ರಿಂದ 18/03/2011 ರ ವರೆಗೆ ಕಿರಿಯ ಅಭಿಯಂತರರಾಗಿ ಹಾಗೂ 18/03/2011 ರಿಂದ ಸಹಾಯಕ ಅಭಿಯಂತರನಾಗಿ ವಿಭಾಗ-2 ರಲ್ಲಿ ಕೆಲಸ ನಿರ್ವಹಿಸುತ್ತಿದ್ದು, ಮರಳು ಉಸ್ತುವಾರಿ ಸಮಿತಿಯಲ್ಲಿ ಜಿಲ್ಲಾಧಿಕಾರಿಗಳು ಅಧ್ಯಕ್ಷರಾಗಿದ್ದು, ಉಪ ನಿರ್ದೇಶಕರು, ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ಪೋಲೀಸ್ ವರಿಷ್ಟಾಧಿಕಾರಿಗಳು, ಅರಣ್ಯ ಸಂರಕ್ಷಣಾಧಿಕಾರಿಗಳು, ಲೋಕೋಪಯೋಗಿ ಇಲಾಖೆ ಕಾರ್ಯಪಾಲಕ ಅಭಿಯಂತರರು ಹಾಗೂ ಇತರೆ ಇಲಾಖೆಯ ಅಧಿಕಾರಿಗಳು ಸಹ ಸದಸ್ಯರಾಗಿದ್ದು, ತಾಲ್ಲೂಕು ಮಟ್ಟದಲ್ಲಿ ಉಪ ವಿಭಾಗಾಧಿಕಾರಿಗಳು, ತಹಶೀಲ್ದಾರರು, ಕಂದಾಯ ಇಲಾಖೆಯ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ತಾಲ್ಲೂಕು ಮಟ್ಟದ ಮರಳು ಉಸ್ತುವಾರಿ ಸಮಿತಿಯು ಕಾರ್ಯ ನಿರ್ವಹಿಸುತ್ತಿರುತ್ತದೆ.

5. ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಮರಳು ಉಸ್ತುವಾರಿ ಸಮಿತಿಯ ನಿರ್ದೇಶನದಂತೆ ಕಾವೇರಿ ನದಿಯ ಬಯಲಿನಲ್ಲಿ ಹಾಗೂ ತಾಲ್ಲೂಕಿನ ವ್ಯಾಪಿಯಲ್ಲಿ ಅಕ್ರಮವಾಗಿ ಸಂಗ್ರಹಿಸುತ್ತಿದ್ದ, ಎತ್ತಿನಗಾಡಿ, ಟ್ರ್ಯಾಕ್ಟರ್, ಲಾರಿ ಹಾಗೂ ಇತರೆ ವಾಹನಗಳಲ್ಲಿ ಅಕ್ರಮವಾಗಿ ಸಾಗಾಣೆ ಮಾಡಲಾಗುತ್ತಿದ್ದ ಮರಳನ್ನು ತಾಲ್ಲೂಕು ಮಟ್ಟದ ಇತರೆ ಸದಸ್ಯ ಇಲಾಖೆಗಳಾದ ಪೋಲೀಸ್ ಇಲಾಖೆ, ಕಂದಾಯ ಇಲಾಖೆ, ಗಣಿ ಮತ್ತು ಭೂ ವಿಜ್ಞಾನ ಇಲಾಖೆಯವರು ಜಪ್ತಿ ಮಾಡಿರುವ ಮರಳನ್ನು ಲೋಕೋಪಯೋಗಿ ಇಲಾಖೆ ಸಹಾಯಕ ಅಭಿಯಂತರರಿಂದ ಅಳತೆ ಮಾಡಿಸಿ ಆಯಾ ಇಲಾಖೆಯ ಕಛೇರಿಯ ಆವರಣದಲ್ಲಿ ಸಂಗ್ರಹಣೆ ಮಾಡಲಾಗಿರುತ್ತದೆ.

6. ಲೋಕೋಪಯೋಗಿ ಇಲಾಖೆಯ ಉಪ ವಿಭಾಗದ ತಾಂತ್ರಿಕ ಸಿಬ್ಬಂದಿಯವರಿಂದ ತನ್ನನ್ನು ಸೇರಿದಂತೆ ಕಛೇರಿಯ ಸಹಾಯಕ ಕಾರ್ಯಪಾಲಕ ಅಭಿಯಂತರರ ನಿರ್ದೇಶನದಂತೆ ಅಳತೆ ಮಾಡಿಸಿಕೊಡಲು ನಿಯೋಜಿಸುತ್ತಿದ್ದು ಅಳತೆ ಮಾಡಿದ ನಂತರ ದಾಸ್ತಾನನ್ನು ಆಯಾ ಇಲಾಖೆಯ ಆವರಣದಲ್ಲಿ ಮಾಡಲಾಗಿದೆ. ಸದರಿ ಜಪ್ತಿ ಮಾಡಿ, ದಾಸ್ತಾನು ಮಾಡಿರುವ ಮರಳು ವಿಲೇವಾರಿಯಾಗುವವರೆಗೆ ಸದರಿ ಮರಳಿನ ನಿಗಾ ಮತ್ತು ನಿರ್ವಹಣೆ ಮಾಡುವುದು ಆಯಾ ಇಲಾಖೆಯ ಜವಾಬ್ದಾರಿಯಾಗಿರುತ್ತದೆ.

7. ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಮರಳು ಉಸ್ತುವಾರಿ ಸಮಿತಿಯ ನಿರ್ದೇಶನದಂತೆ ಸರ್ಕಾರಿ ಇಲಾಖೆಗಳಿಂದ ಹಾಗೂ ಸಾರ್ವಜನಿಕರಿಂದ ಕಟ್ಟಡಕ್ಕೆ ಬೇಕಾಗಿರುವ ಮರಳನ್ನು ಕೋರಿ ಉಪ ವಿಭಾಗಾಧಿಕಾರಿಗಳಿಗೆ ಅರ್ಜಿ ಸಲ್ಲಿಸಿದ್ದು, ಸದರಿಯವರಿಂದ ಶಿಫಾರಸ್ಸು ಆಗಿರುವ ಅರ್ಜಿಗಳು ಲೋಕೋಪಯೋಗಿ ಇಲಾಖೆ

ವಿಭಾಗ ಮತ್ತು ಉಪ ವಿಭಾಗಕ್ಕೆ ಕಳುಹಿಸುತ್ತಿದ್ದು, ಆದ್ಯತೆ ಮೇರೆಗೆ ಮರಳನ್ನು ವಿತರಿಸಲಾಗಿರುತ್ತದೆ.

8. ಮರಳು ಉಸ್ತುವಾರಿ ಸಮಿತಿಯು ನಿಗಧಿಪಡಿಸಿದ ದರ ಮತ್ತು ಪ್ರಮಾಣದಂತೆ ಕಾರ್ಯಪಾಲಕ ಅಭಿಯಂತರರಿಗೆ ವಿಳಾಸಿಸಿದ್ದ ಡಿ.ಡಿ.ಗಳನ್ನು ಪಡೆದು ವಿಭಾಗ ಮತ್ತು ಉಪ ವಿಭಾಗಗಳಿಂದ ನಿಗಧಿತ ನಮೂನೆಯಲ್ಲಿ ಪರ್ಮಿಟ್‌ನ್ನು ವಿತರಿಸುತ್ತಿದ್ದು ನಂತರ ಉಪ ವಿಭಾಗದ ಮುಖ್ಯಸ್ಥರಾದ ಸಹಾಯಕ ಕಾರ್ಯಪಾಲಕ ಅಭಿಯಂತರರು ರವರು ಸೂಚಿಸುವ ತಾಂತ್ರಿಕ ಸಿಬ್ಬಂದಿ ತನ್ನನ್ನು ಸೇರಿದಂತೆ, ಗುಮಾಸ್ತರನ್ನು, ಸಹಾಯಕರೊಂದಿಗೆ ಪರ್ಮಿಟ್‌ನಲ್ಲಿ ತಿಳಿಸಿರುವ ಸಂಗ್ರಹಣಾ ಸ್ಥಳದಿಂದ ನಿಗಧಿತ ಪ್ರಮಾಣದ ಮರಳನ್ನು ಪ್ರಮಾಣದಂತೆ ತುಂಬಿಸಿ ಕಳುಹಿಸಲು ಮಾತ್ರ ನಿಯೋಜಿಸಲ್ಪಟ್ಟಿರುತ್ತದೆ. ವಿಲೇವಾರಿಗಾಗಿ ಪರ್ಮಿಟ್‌ಗಳು ಮಾತ್ರ ಬರುತ್ತಿದ್ದು, ಡಿ.ಡಿ.ಆಗಲಿ, ಹಣದ ಚಲಾವಣೆಯಾಗಲಿ ಯಾವುದೂ ಇರುವುದಿಲ್ಲವೆಂದು ನಮೂದಿಸಿರುತ್ತಾರೆ.

9. **ದೂರುದಾರನು ಪ್ರತ್ಯುತ್ತರವನ್ನು ಸಲ್ಲಿಸಿದ್ದು ಪರಿಶೀಲಿಸಲಾಗಿ,** 2015 ಮತ್ತು 2016ರಲ್ಲಿ ಸುಮಾರು 20 ಲಕ್ಷ ರೂಪಾಯಿಗಳ ಮೌಲ್ಯದ ಸರ್ಕಾರದ ಮರಳನ್ನು ಕೊಳ್ಳೇಗಾಲ ತಾಲ್ಲೂಕು ಕೆ.ಪಿ.ಡಬ್ಲ್ಯೂ.ಡಿ. ಕಛೇರಿಯ ಸಹಾಯಕ ಇಂಜಿನಿಯರ್ ರವರು ಮಾರಾಟ ಮಾಡಿ ಸ್ವಂತಕ್ಕೆ ಬಳಸಿರುತ್ತಾರೆ. ತನಿಖೆ ಮಾಡಿ ಹಣವನ್ನು ವಸೂಲಿ ಮಾಡಿ ಸರ್ಕಾರದ ಖಜಾನೆಗೆ ಜಮಾ ಮಾಡಬೇಕೆಂದು ಕೋರಿರುತ್ತಾರೆ.

10. **ತನಿಖಾ ಹಂತದಲ್ಲಿ ಪೋಲೀಸ್ ನಿರೀಕ್ಷಕರು, ಚಾಮರಾಜನಗರ ಇವರಿಂದ ತನಿಖಾ ವರದಿಯನ್ನು ಪಡೆದುಕೊಂಡಿದ್ದು,** ಕೊಳ್ಳೇಗಾಲ ಲೋಕೋಪಯೋಗಿ ಇಲಾಖೆ ಉಪ–ವಿಭಾಗದ ಕಛೇರಿಯಲ್ಲಿ ದಿನಾಂಕ: 13/11/1998 ರಂದು ಎದುರುದಾರರು ಕಿರಿಯ ಇಂಜಿನಿಯರ್ ಆಗಿ ದಿನಗೂಲಿ ನೌಕರನ ಹುದ್ದೆಯಿಂದ ಸಕ್ರಮಗೊಂಡು

ಕಾರ್ಯನಿರ್ವಹಿಸುತ್ತಿದ್ದು, ದಿನಾಂಕ: 18/03/2011 ರಂದು ಕಿರಿಯ ಇಂಜಿನಿಯರ್ ಹುದ್ದೆಯಿಂದ ಸಹಾಯಕ ಇಂಜಿನಿಯರ್ ವಿಭಾಗ-2 ಹುದ್ದೆಗೆ ಪದೋನ್ನತಿ ಹೊಂದಿ ದಿನಾಂಕ: 25/03/2019 ರವರೆಗೆ ಕೊಳ್ಳೇಗಾಲ ಲೋಕೋಪಯೋಗಿ ಉಪವಿಭಾಗದಲ್ಲಿ ಕಾರ್ಯ ನಿರ್ವಹಿಸಿರುತ್ತಾರೆ.

11. ದಿನಾಂಕ: 21/02/2015 ರಿಂದ 08/11/2016 ರವರೆಗೆ ಜಿಲ್ಲಾ ಟಾಸ್ಕ್ ಪೋಸ್ ಸಮಿತಿಯ ನಿರ್ದೇಶನದಂತೆ ಕಾವೇರಿ ನದಿಯ ಬಯಲಿನಲ್ಲಿ ಹಾಗೂ ಸುತ್ತಮುತ್ತಲೂ ಅಕ್ರಮವಾಗಿ ಸಂಗ್ರಹಿಸಿರುವ/ಸಾಗಾಟ ಮಾಡಿರುವ ಮರಳನ್ನು ಕಂದಾಯ, ಪೋಲೀಸ್, ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಸಿಬ್ಬಂಧಿಯೊಂದಿಗೆ, ಲೋಕೋಪಯೋಗಿ ಇಲಾಖೆಯ ಸಿಬ್ಬಂದಿ ಸೇರಿದಂತೆ ಜಪ್ತಿ ಮಾಡಲು ಈ ಕಛೇರಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಎಲ್ಲಾ ಶಾಖಾಧಿಕಾರಿಗಳನ್ನು ಪಾಳಿಯ ಮೇಲೆ ಕಾರ್ಯಾಚರಣೆಗೆ ಎದುರುದಾರರು ಸೇರಿದಂತೆ ಇತರೆ ಸಿಬ್ಬಂದಿಗಳನ್ನು ನಿಯೋಜಿಸಲಾಗಿರುತ್ತದೆ ಎಂದು ಉಲ್ಲೇಖಿಸಿರುತ್ತಾರೆ.

12. ಜಿಲ್ಲಾ ಮಟ್ಟದ ಮರಳು ಉಸ್ತುವಾರಿ ಸಮಿತಿಯಲ್ಲಿ ಜಿಲ್ಲಾಧಿಕಾರಿಗಳು ಅಧ್ಯಕ್ಷರಾಗಿರುತ್ತಾರೆ. ಉಪ ನಿರ್ದೇಶಕರು, ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ಚಾಮರಾಜನಗರ ರವರು ಸದಸ್ಯ ಕಾರ್ಯದರ್ಶಿಯಾಗಿರುತ್ತಾರೆ. ಪೋಲೀಸ್ ವರಿಷ್ಠಾಧಿಕಾರಿಗಳು, ಅರಣ್ಯ ಸಂರಕ್ಷಣಾಧಿಕಾರಿಗಳು, ಲೋಕೋಪಯೋಗಿ ಇಲಾಖೆ ಕಾರ್ಯಪಾಲಕ ಇಂಜಿನಿಯರ್ ಹಾಗೂ ಇತರೇ ಇಲಾಖೆಯ ಅಧಿಕಾರಿಗಳು ಸಹ ಸದಸ್ಯರಾಗಿರುತ್ತಾರೆ. ತಾಲ್ಲೂಕು ಮಟ್ಟದಲ್ಲಿ ಉಪ ವಿಭಾಗಾಧಿಕಾರಿಗಳು, ಕಂದಾಯ ಇಲಾಖೆಯವರ ಅಧ್ಯಕ್ಷತೆಯಲ್ಲಿ ತಾಲ್ಲೂಕು ಮಟ್ಟದ ಮರಳು ಉಸ್ತುವಾರಿ ಸಮಿತಿಯು ಕಾರ್ಯನಿರ್ವಹಿಸುತ್ತಿರುವುದಾಗಿ ತಿಳಿಸಿರುತ್ತಾರೆ.

13. ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಮರಳು ಉಸ್ತುವಾರಿ ಸಮಿತಿಯ ನಿರ್ದೇಶನದಂತೆ ಅಕ್ರಮವಾಗಿ ಸಾಗಾಣಿಕೆ ಮಾಡಲಾಗುತ್ತಿದ್ದ ಮರಳನ್ನು ತಾಲ್ಲೂಕು ಮಟ್ಟದ ಇತರೆ ಸದಸ್ಯ ಇಲಾಖೆಯ ಅಂದರೆ ಪೋಲೀಸ್ ಕಂದಾಯ ಇಲಾಖೆ, ಗಣಿ ಮತ್ತು ಭೂ ವಿಜ್ಞಾನ ಇಲಾಖೆಯವರು ಜಪ್ತಿ ಮಾಡಿರುವ ಮರಳನ್ನು ಸಂಬಂಧಪಟ್ಟವರ ಕಛೇರಿಯ ಆವರಣದಲ್ಲಿ ಸಂಗ್ರಹಣೆ ಮಾಡಲಾಗಿರುತ್ತದೆ. ಲೋಕೋಪಯೋಗಿ ಇಲಾಖೆಯ ಉಪ ವಿಭಾಗದ ತಾಂತ್ರಿಕ ಸಿಬ್ಬಂದಿಯವರಿಂದ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ರವರ ನಿರ್ದೇಶನದಂತೆ ಅಳತೆ ಮಾಡಿಕೊಡಲು ನಿಯೋಜಿಸುತ್ತಿದ್ದು ಅಳತೆ ಮಾಡಿದ ನಂತರ ದಾಸ್ತಾನು ಆಯಾ ಇಲಾಖೆಯ ಆವರಣದಲ್ಲಿ ಶೇಖರಿಸಿಡಲಾಗಿದೆ. ಜಪ್ತಿಮಾಡಿ ದಾಸ್ತಾನು ಮಾಡಿರುವ ಮರಳು ವಿಲೇವಾರಿಯಾಗುವವರೆಗೆ ಸದರಿ ಮರಳಿನ ನಿಗಾ ಮತ್ತು ನಿರ್ವಹಣೆ ಮಾಡುವುದು ಆಯಾಯ ಇಲಾಖೆಯ ಜವಾಬ್ದಾರಿಯಾಗಿರುತ್ತದೆಂದು ಉಲ್ಲೇಖಿಸಿರುತ್ತಾರೆ.

14. ಮರಳು ಉಸ್ತುವಾರಿ ಸಮಿತಿಯ ನಿರ್ದೇಶನದಂತೆ ಕಟ್ಟಡಗಳಿಗೆ ಬೇಕಾಗಿರುವ ಮರಳಿನ ಅರ್ಜಿಗಳನ್ನು ಲೋಕೋಪಯೋಗಿ ಇಲಾಖೆ ವಿಭಾಗ ಮತ್ತು ಉಪ ವಿಭಾಗಕ್ಕೆ ಕಳುಹಿಸುತ್ತಿದ್ದು ಆಧ್ಯತೆ ಮೇರೆಗೆ ಮರಳನ್ನು ವಿತರಿಸಲಾಗಿರುತ್ತದೆ.

15. ಜಿಲ್ಲಾ ಟಾಸ್ಕ್ ಪೋರ್ಸ್ ಸಮಿತಿಯ ನಿರ್ದೇಶನದಂತೆ ಕಾವೇರಿ ನದಿಯ ಬಯಲಿನಲ್ಲಿ ಹಾಗೂ ಸುತ್ತಮುತ್ತಲು ಅಕ್ರಮವಾಗಿ ಸಂಗ್ರಹಿಸಿರುವ/ಸಾಗಾಟ ಮಾಡಿರುವ ಮರಳನ್ನು ಕಂದಾಯ ಇಲಾಖೆ, ಪೋಲೀಸ್ ಇಲಾಖೆ, ಗಣಿ ಇಲಾಖೆಯವರಿಂದ ಜಪ್ತಿ ಮಾಡಲಾಗಿರುತ್ತದೆ. ಇಲಾಖೆಯವರ ಕೋರಿಕೆಯಂತೆ ಜಪ್ತಿ ಮಾಡಿರುವ ಮರಳನ್ನು ಲೋಕೋಪಯೋಗಿ ಇಲಾಖೆಯವರ ಸಿಬ್ಬಂದಿವರ್ಗದವರಿಂದ ಅಳತೆ ಮಾಡಿಸಿ ಸಂಬಂಧಪಟ್ಟ ಇಲಾಖೆ ಕಛೇರಿ

ಆವರಣಸದಲ್ಲಿ ಸಂಗ್ರಹಿಸಲಾಗಿದ್ದು, ಜಪ್ತಿಯಾದ ಮರಳಿನ ವಿಲೇವಾರಿಯಾಗುವವರೆಗೂ ನಿಗಾ ಮತ್ತು ನಿರ್ವಹಣೆ ಮಾಡುವುದು ಲೊಕೋಪಯೋಗಿ ಇಲಾಖೆಯ ಜವಾಬ್ದಾರಿಯಾಗಿರುತ್ತದೆ. ಸಾರ್ವಜನಿಕ ಕೋರಿಕೆಯ ಅರ್ಜಿಗಳನುಸಾರ ಆದ್ಯತೆ ಮೇರೆಗೆ ಉಪವಿಭಾಗಾಧಿಕಾರಿಗಳು ಕೊಳ್ಳೇಗಾಲರವರ ಶಿಫಾರಸ್ಸಿನ ಮೇರೆಗೆ ಸಂಬಂಧಿಸಿದವರಿಂದ ಮರಳಿನ ಪ್ರಮಾಣಕ್ಕೆ ತಗಲುವ ಮೊತ್ತವನ್ನು ಡಿ.ಡಿ. ಮುಖಾಂತರ ಪಡೆದುಕೊಂಡು ನಂತರ ಪರ್ಮಿಟ್ ಗಳನ್ನು ವಿತರಿಸಲಾಗಿರುತ್ತದೆ.

16. ಕೊಳ್ಳೇಗಾಲ ತಾಲ್ಲೂಕು ಕಛೇರಿ ಮತ್ತು ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಕೊಳ್ಳೇಗಾಲ ಉಪ ವಿಭಾಗ ಕಛೇರಿಯಿಂದ 2015 ರಿಂದ 2016ನೇ ಸಾಲಿನ ಮರಳು ದಾಸ್ತಾನು/ವಿತರಣೆಗೆ ಸಂಬಂಧಿಸಿದಂತೆ ಪಡೆದುಕೊಂಡಿದ್ದ ದಾಖಲಾತಿಗಳ ಪರಿಶೀಲನೆಯಿಂದ ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ಪೋಲೀಸ್ ಇಲಾಖೆ, ಕಂದಾಯ ಇಲಾಖೆ ರವರುಗಳೂ ಮಾತ್ರ ಅಕ್ರಮ ಮರಳು ಸಾಗಾಣಿಕೆಯನ್ನು ಪತ್ತೆ ಮಾಡಿ ಕೊಳ್ಳೇಗಾಲ ಉಪ ವಿಭಾಗ, ಲೋಕೋಪಯೋಗಿ ಇಲಾಖೆ ಕಛೇರಿ ಸಹಾಯಕ ಅಭಿಯಂತರರಿಂದ ಅಳತೆ ಮಾಡಿಸಿ ಸ್ಟ್ಯಾಂಡ್ ಟಾಸ್ಕ್ ಫೋರ್ಸ್ ಸಮಿತಿಯ ತೀರ್ಮಾನದಂತೆ ಮರಳು ದಾಸ್ತಾನು ಮಾಡಲು ಯಾರ್ಡ್‌ಗಳನ್ನು ಗುರುತಿಸಿಕೊಂಡು ಸದರಿ ಸ್ಥಳಗಳಲ್ಲಿ ಜಪ್ತಿ ಮಾಡಿದ ಅಕ್ರಮ ಮರಳನ್ನು ಸಂಗ್ರಹಣೆ ಮಾಡಿರುವುದು ಕಂಡುಬಂದಿರುತ್ತದೆ.

17. ಅಕ್ರಮ ಮರಳು ಸಾಗಾಣಿಕೆ ಪತ್ತೆ ಹಚ್ಚಿ ಮರಳು ದಾಸ್ತಾನು ಮಾಡಿದ್ದು ಮರಳು ಯಾರ್ಡ್‌ಗಳಲ್ಲಿ ಶೇಖರಣೆ ಮಾಡುವಾಗ ಮಾಡಿಸಿರುವ ಅಳತೆ ಪರಿಮಾಣಕ್ಕೆ ಹಾಗೂ ಉಪ ವಿಭಾಗಾಧಿಕಾರಿಗಳ ಆದೇದ ನಂತರ ಸಾರ್ವಜನಿಕರಿಗೆ/ಅಭಿವೃದ್ಧಿ ಕಾರ್ಯಗಳಿಗೆ ಮರಳು ವಿತರಣಾ ಕಾಲದಲ್ಲಿ ಲೋಕೋಪಯೋಗಿ

ಇಲಾಖೆಯವರು ಅಳತೆ ಮಾಡಿ ವಿತರಿಸಿರುವ ಪರಿಮಾಣಕ್ಕೆ ಸಂಬಂಧಿಸಿದಂತೆ ಮರಳು ದಾಸ್ತಾನು ವಹಿ ಮತ್ತು ಮರಳು ವಿತರಣೆ ವಹಿ ನಿರ್ವಹಿಸದೇ ಇರುವುದು ಎದುರುದಾರನ ಆಕ್ಷೇಪಣೆ ಹಾಗೂ ತನಿಖಾಧಿಕಾರಿಯ ವರದಿಯಿಂದ ಕಂಡುಬಂದಿರುತ್ತದೆ.

18. ಸಂಗ್ರಹಿಸಲಾದ ದಾಖಲೆಗಳನ್ನು ಪರಿಶೀಲಿಸಲಾಗಿ ಮರಳು ದಾಸ್ತಾನು ಮತ್ತು ವಿತರಣಾ ವಹಿಗಳನ್ನು ನಿರ್ವಹಿಸದೇ ಹೋಗಿರುವುದು ಕಂಡುಬರುತ್ತದೆ. ತಹಶೀಲ್ದಾರರು, ಕೊಳ್ಳೆಗಾಲ ಇವರು ದಿ: 10/12/2015 ರಿಂದ 31/12/2015 ರ ವರೆಗೆ ಹಾಗೂ 12/01/2016 ರಿಂದ 14/12/2016 ರವರೆಗೆ ಸಲ್ಲಿಸಿರುವ ಪತ್ರಗಳನ್ನು ಪರಿಶೀಲಿಸಲಾಗಿ, ತಹಶೀಲ್ದಾರರು, ಸಹಾಯಕ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಗೆ ಜಪ್ತಿಯಾದ ಮರಳನ್ನು ಅಳತೆ ಮಾಡಿ ಕಛೇರಿಗೆ ವರದಿ ಸಲ್ಲಿಸುವಂತೆ ಸೂಚಿಸಿ ಸಲ್ಲಿಸಿರುವ 154 ಪತ್ರಗಳು ಕಂಡುಬರುತ್ತಿದ್ದು, ಹಾಗೆಯೇ ಅರಕ್ಷಕ ನಿರೀಕ್ಷಕರು, ಹಾನೂರು ಪೋಲಿಸ್ ಠಾಣೆ, ಚಾಮರಾಜನಗರ ರವರು ತಹಶೀಲ್ದಾರರಿಗೆ ಬರೆದ ಪತ್ರದ ಪ್ರತಿಗಳು ಮರಳನ್ನು ಜಪ್ತಿ ಮಾಡಿದ ಕುರಿತು ಕಂಡುಬರುತ್ತದೆ.

i) ಎದುರುದಾರನು ತಾನು ಮರಳನ್ನು ಅಳತೆ ಮಾಡಿದ ಕುರಿತು ಮತ್ತು ಸ್ವೀಕರಿಸಿದ ಕುರಿತು ದಾಸ್ತಾನುವಹಿಯನ್ನು ನಿರ್ವಹಿಸಿರುವುದಿಲ್ಲ.

ii) ಎದುರುದಾರನು ಸ್ವೀಕರಿಸಿದ ಮರಳಿನ ದಾಸ್ತಾನನ್ನು ವಿಲೇವಾರಿ ಮಾಡುವಾಗ ಎಷ್ಟು ಪ್ರಮಾಣದ ಮರಳನ್ನು ವಿಲೇವಾರಿ ಮಾಡಲಾಗಿದೆ ಎನ್ನುವ ಕುರಿತು ವಿಲೇವಾರಿ ವಹಿಯನ್ನು ನಿರ್ವಹಿಸಿರುವುದಿಲ್ಲ.

iii) ದಾಸ್ತಾನು ವಹಿ ಮತ್ತು ವಿಲೇವಾರಿ ವಹಿಯನ್ನು ನಿರ್ವಹಿಸದೇ ಹೋಗಿರುವುದರಿಂದ ಜಪ್ತಿ ಮಾಡಿದ ಮರಳು ಮತ್ತು ವಿಲೇವಾರಿ ಮಾಡಿದ ಮರಳು ಎಷ್ಟು ಪ್ರಮಾಣ ಎಂದು ಕ್ರೋಢೀಕರಿಸಲು ಸಾಧ್ಯವಾಗಿರುವುದಿಲ್ಲ.

iv) ದಾಸ್ತಾನು ಮತ್ತು ವಿಲೇವಾರಿ ಪ್ರಮಾಣವನ್ನು ಲೆಕ್ಕ ಹಾಕಿದಲ್ಲಿ ಸರ್ಕಾರಕ್ಕೆ ಬರಬಹುದಾದ ರಾಜಸ್ವ ಎಷ್ಟು ಎಂಬುದನ್ನು ದೃಢೀಕರಿಸಬಹುದಾಗಿದ್ದು, ಎದುರುದಾರನು ದಾಸ್ತಾನು ಮತ್ತು ವಿಲೇವಾರಿ ವಹಿಯನ್ನು ನಿರ್ವಹಿಸದೇ ಹೋಗಿರುವುದರಿಂದ ಸರ್ಕಾರಕ್ಕೆ ರಾಜಧನ ಎಷ್ಟು ನಷ್ಟವುಂಟಾಗಿದೆ ಎಂದು ಹೇಳಲು ಸಾಧ್ಯವಿಲ್ಲ.

19. ಎದುರುದಾರನಿಗೆ ವಿಲೇವಾರಿ ಮಾಡಲು ಆದೇಶ ನೀಡಿದಾಗ ಎಷ್ಟು ಪ್ರಮಾಣದಲ್ಲಿ ಯಾರಿಗೆ ವಿಲೇವಾರಿ ಮಾಡಲಾಗಿದೆ ಎನ್ನುವ ಕುರಿತು ವಿಲೇವಾರಿ ವಹಿಯನ್ನು ನಿರ್ವಹಿಸದೇ ಇರುವುದು ಹಾಗೂ ಮರಳಿನ ಸ್ವಾಧೀನತೆ ಹಾಗೂ ವಿಲೇವಾರಿ ಎದುರುದಾರನ ಜವಾಬ್ದಾರಿಯಾಗಿದ್ದು, ಎರಡೂ ಕೆಲಸಗಳನ್ನು ಸೂಕ್ತವಾಗಿ ನಿರ್ವಹಿಸದೇ ಹೋಗಿರುವುದರಿಂದ ಸರ್ಕಾರಕ್ಕೆ ಬರಬಹುದಾದ ರಾಜಸ್ವದಲ್ಲಿ ನಷ್ಟವುಂಟಾಗಿದೆ ಎಂದು ದೂರುದಾರನು ಅಪಾದಿಸಿರುವ ಅಂಶವು ದೃಢಪಡುತ್ತದೆ.

20. ಈ ಮೇಲ್ಕಾಣಿಸಿದ ಕಾರಣಗಳಿಗಾಗಿ ಎದುರುದಾರನು ಜಪ್ತಿಯಾದ ಮರಳಿನ ದಾಸ್ತಾನುವಹಿ ಹಾಗೂ ವಿಲೇವಾರಿ ಮಾಡಿದ ಮರಳಿನ ವಿಲೇವಾರಿ ವಹಿಯನ್ನು ನಿರ್ವಹಿಸದೇ ಹೋಗಿರುವುದರಿಂದ ಸರ್ಕಾರಕ್ಕೆ ಬರಬಹುದಾಗಿದ್ದ ರಾಜಧನದ ಪ್ರಮಾಣದ ಕುರಿತು ಕ್ರೋಢೀಕರಿಸಲು ಸಾಧ್ಯವಾಗದೇ ಹೋಗಿರುವುದರಿಂದ ಎದುರುದಾರನಿಂದ ಸರ್ಕಾರಕ್ಕೆ ಉಂಟಾದ ನಷ್ಟದ ಪ್ರಮಾಣವನ್ನು ಕ್ರೋಢೀಕರಿಸಿ ಸರ್ಕಾರಕ್ಕೆ ಪಾವತಿಸುವ ಕುರಿತು ಸೂಕ್ತ ಕ್ರಮವನ್ನು ತೆಗೆದುಕೊಳ್ಳಲು ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

21. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2) ರ ಪ್ರಕಾರ, ಸಕ್ಷಮ ಪ್ರಾಧಿಕಾರವು ಈ ವರದಿಯನುಸಾರ ಕೈಗೊಂಡ ಕ್ರಮದ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ, ಈ ವರದಿ ತಲುಪಿದ ದಿನಾಂಕದಿಂದ <u>ಒಂದು ತಿಂಗಳೊಳಗಾಗಿ</u> ಈ ಪ್ರಾಧಿಕಾರಕ್ಕೆ ವರದಿ ಮಾಡಲು ಕೋರಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿದೆ.

1/4

**[ನ್ಯಾಯಮೂರ್ತಿ ಬಿ.ಎಸ್. ಪಾಟೀಲ]**
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ, ಬೆಂಗಳೂರು.**